

ನೀಡುತ್ತಿರಲಿಲ್ಲ. ಈ ಮಾತಿಲ್ಲದ ಮೌನವೇ ಅವನನ್ನು ಚುಚ್ಚುತ್ತಿತ್ತು. ಎಂತಹದೋ ಒಂದು ಉದ್ಯೋಗಕ್ಕೆ ಗಟ್ಟಿ ಜೋತು ಬೀಳುವುದು ಏನೂ ಇಲ್ಲದ್ದಕ್ಕಿಂತ ಉತ್ತಮ ಎನ್ನುವ ಹೆತ್ತವರ ನಿಲುವು ಒಂದು ಹಂತದಲ್ಲಿ ಬಹುತೇಕ ಒಪ್ಪುವವನಿದ್ದ. ಆದರೆ ಇವತ್ತು ಬಹುಕಾಲದ ನಂತರ ನೌಕರಿ ಸಿಗುವ ಸಾಧ್ಯತೆ ಇರುವುದು ಎಂದೋ ಹುದುಗಿಸಿಟ್ಟಿದ್ದ ಹಳೆಯ ಕನಸಿನ ಕನ್ನಡಿಯ ಮೇಲಿನ ದೂಳು ಜೇಡರಬಲೆಯನ್ನು ಚೊಕ್ಕ ಮಾಡಿದ್ದವು.

ಆದರೆ ನಿಜವಾಗಿ ಹುದುಗಿಸಿಟ್ಟಿದ್ದನೆ? ನಿನ್ನೆ ಸಪ್ಪಳ ಮಾಡುತ್ತ ಅವ್ಯಾಹತ ಮಳೆ ಸುರಿಯುತ್ತಿದ್ದಾಗ ಏನೋ ನಡೆದಿತ್ತು. ಜಗಲಿಯಲ್ಲಿ ಕೂತು ಮಾತನಾಡುತ್ತಿದ್ದರು. ಅಮ್ಮ ಹೇಳಿದ್ದು, 'ಹುಡುಗನಿಗೆ ಕೆಲಸ ಸಿಕ್ಕಿದ್ದು ಗೊತ್ತಾಯ್ತಾ ?'

'ಎಲ್ಲಿ? ಯಾವ ಆಫೀಸಿನಲ್ಲಿ?' ಪುತುಲ್‌ಳ ತಾಯಿ ಕೇಳಿದ್ದಳು. ಅವಳೋ ಅರೋಗ್ಯ ಕ್ಷೀಣಿಸುತ್ತಿರುವುದಕ್ಕೆ ತನ್ನಿಂದ ಹಲವು ಮಕ್ಕಳಿಗೆ ಅಪ್ಪ ಎನಿಸಿಕೊಂಡ